ಮರ ಕಪಾತಿಗೆ ಬಂದಾಗ ಮೊದಲು ಮಚ್ಚು ಮಸೆಯುವುದು ಅವನ ಕೆಲಸ. ದಪ್ಪನಾದ ಮರದ ಕೊಂಟಿನ ಮೇಲೆ ಬೆಣಚುಕಲ್ಲನ್ನು ಪುಡಿ ಮಾಡಿ ಹರಡಿ ತದೇಕ ಚಿತ್ತದಿಂದ ಮಚ್ಚು ಮಸೆಯಲು ಆರಂಭಿಸುತ್ತಾನೆ. ಆಗ ಮಾತನಾಡಿಸಿದರೆ, 'ಆಂ...ಊಂ' ಗಳಷ್ಟೇ ನಮಗೆ ಸಿಗುವ ಉತ್ತರ, ಕತ್ತನ್ನೂ ಎತ್ತುವುದಿಲ್ಲ. ಮಚ್ಚು ಹರಿತವಾಯಿತು ಎಂದು ಖಾತರಿಯಾದ ಮೇಲಷ್ಟೇ ಮಾತುಕತೆ. ಇವನು ಮರ ಏರುವುದು, ಕೊಂಬೆಯಿಂದ ಕೊಂಬೆಗೆ ದಾಟುವುದನ್ನು ಕೆಳಗಿನಿಂದ ನೋಡಿದಾಗ ಮೊದಮೊದಲು ನನಗೆ ಎದೆ ಜಲ್ ಎನ್ನುತ್ತಿತ್ತು. ಆದರೆ, ಜಡೆಯಪ್ಪನ ಅದಮ್ಯ ಆತ್ಮವಿಶ್ವಾಸವನ್ನು ಕಂಡು ನಾನು ಈ ದೃಶ್ಯಾವಳಿಗಳಿಗೆ ಹೊಂದಿಕೊಂಡುಬಿಟ್ಟೆ. ಜಡೆಯಪ್ಪನ ಮರ ಕಪಾತು ವೈಖರಿಯನ್ನು ಬಹಳವಾಗಿ ಮೆಚ್ಚಿ ಪುಟ್ಟರಂಗನಿಗೆ ವರ್ಣಿಸಿದೆ. ಅವನು, 'ಓ... ನಮ್ ಅಲಗನ ಅಳಿಯ ಜಡೆಯಪ್ಪ ತಾನೆ ಸಾರ್... ಹುಡುಗ ಮರದಲ್ಲೆ ಆಡ್ತಾನೆ ಸಾರ್...' ಎಂದ. ಪುಟ್ಟರಂಗನ ಮಾತು ನಿಜ ಅನ್ನಿಸಿತು. ಜಡೆಯಪ್ಪನ ಮರ ಏರುವ ಕೌಶಲ – ಬಿಲ್ಲಿನಂತೆ ಬಾಗಿ, ಬಾಣದಂತೆ ಸೆಟೆದು ನಿಲ್ಲುವ ಅವನ ಅಂಗಸೌಷ್ಠವ ನುರಿತ ನರ್ತಕನ ಅಸ್ಖಲಿತ ನಾಟ್ಯ ಭಂಗಿಗಳೋ ಎಂಬಂತೆ ಭಾಸವಾಗುತ್ತವೆ. 'ಹುಡುಗ ಮರದಲ್ಲೇ ಆಡ್ತಾನೆ' ಎನ್ನುವ ಪುಟ್ಟರಂಗನ ಮಾತು ಈ ಕೌಶಲದ ಕಾವ್ಯಾತ್ಮಕ ವರ್ಣನೆ! ಇದರ ಹಿಂದೆ ಪ್ರಯತ್ನ ಸಾಧನೆಗಳು ಇರಲೇಬೇಕಲ್ಲವೆ? ಹಾಗಾಗಿ, ಇದೂ ಸಹ ಒಂದು ವಿದ್ಯೆಯಲ್ಲವೆ ಎಂಬ ವಿಚಾರ ನನ್ನ ತಲೆಯಲ್ಲಿ ಗುನುಗುಡಲು ಆರಂಭಿಸಿತು. ಶಾಲೆಯಲ್ಲಿ ಕಲಿತದ್ದು ಮಾತ್ರ ವಿದ್ಯೆ ಎಂಬ ಜೊಳ್ಳು ನಂಬಿಕೆಗೆ ಜೋತುಬಿದ್ದ ಆಧುನಿಕ ವಿದ್ಯಾವಂತರನ್ನು ನೆನೆದು ಅವರ ಬಗ್ಗೆ ಅನುಕಂಪ ಮೂಡಿತು. ಶಾಲೆಯಲ್ಲಿ ಕಲಿತದ್ದನ್ನೆಲ್ಲ ಮರೆತ ಅನಂತರ ಯಾವುದು ನೆನಪಿನಲ್ಲಿ ಉಳಿಯುತ್ತದೊ ಅದು ವಿದ್ಯೆ ಎಂಬ ಐನ್‌ಸ್ಟೈನ್ ಅವರ ಮಾತು ನೆನಪಿಗೆ ಬಂತು. ಈ ವಿದ್ಯಾವಂತರಿಗೆ ಬೀಜ ಬಿತ್ತಲು ಬರುವುದಿಲ್ಲ. ತೆನೆಕೊಯ್ಯಲು ಅಥವ ಒಕ್ಕಣೆ ಮಾಡಲು ಬರುವುದಿಲ್ಲ. ಆದರೆ, ಪುಷ್ಕಳವಾದ ಮೃಷ್ಟಾನ್ನ ಮಾತ್ರ ಬೇಕು; ಇವರಿಗೆ ಹಸುವಿನ ಹಾಲು ಕರೆಯಲು ಬರುವುದಿಲ್ಲ, ಆದರೆ ಕೆನೆ ಹಾಲು – ಮೊಸರು ಇಲ್ಲದೆ ಊಟ ಮಾಡುವವರಲ್ಲ! ಮರ ಹತ್ತುವುದು – ಜೇನು ಇಳಿಸುವುದಂತೂ ದೂರದ ಮಾತು; ಆದರೆ ಅಡವಿಯ ಜೇನು ಇವರ ಮನೆಯ ಬಾಗಿಲಿಗೇ ಬರಬೇಕು. ಹಾಗಾದರೆ, ಇವರು ಕಲಿತದ್ದು ಏನು? ಅದು ಏನಾದರೂ ಆಗಿರಲಿ, ಅನ್ನ ಹುಟ್ಟಿಸುವ ವಿದ್ಯೆಯಂತೂ ಅಲ್ಲ. ಇವರನ್ನು ಸಂಕೋಚವೇ ಇಲ್ಲದ ಪರಾವಲಂಬಿಗಳು ಎನ್ನಬೇಕೆ? ಹಾಗಾದರೆ, ಮರ ಹತ್ತುವ ಕೋರ್ಸ್ ನಡೆಸುತ್ತೀರ ಎಂದು ನೀವು ಕೇಳಬಹುದು! ಅದು ಸಾಧ್ಯವಿಲ್ಲ ಎಂದು ಉತ್ತರಿಸಬೇಕಾದೀತು. ವಿದ್ಯಾವಂತರ ತಿಳಿವಳಿಕೆ ಏನೆಂದರೆ ಕೋರ್ಸ್ ನಡೆಸಲು ಸಾಧ್ಯವಾಗದಿದ್ದರೆ ಅದು ವಿದ್ಯೆಯೇ ಅಲ್ಲ. ಕಸುಬುದಾರಿಕೆ ಎಂದು ನಾವು ಗುರುತಿಸುವ ಅನೇಕ ಕಸುಬುಗಳು – ಬುಟ್ಟಿ ನೇಯುವುದು, ಕುಂಬಾರಿಕೆಯಂತಹ ಕಲೆಗಳು ಜೀವನದ ಭಾಗವಷ್ಟೇ ಅಲ್ಲ, ಇದೇ ಜೀವನ. ಹಾಗಲ್ಲದಿದ್ದರೆ ಅಲ್ಲಿ ಕಸುಬುದಾರಿಕೆ ಮೈಗೂಡುವುದಿಲ್ಲ. ನಿಜವಾದ ಕಸುಬುದಾರರಲ್ಲಿ ಜೀವನವೇ ಬೇರೆ, ಕೈಗೊಂಡ ಕಸುಬು ಬೇರೆ ಎಂಬ ಭೇದವಿರುವುದಿಲ್ಲ. ಈ ಜೀವನ ವಿಧಾನಗಳನ್ನೇ ನಾವು ಸಾರಾಸಗಟಾಗಿ ತಿರಸ್ಕರಿಸಿದಾಗ ಈ ಕಸುಬುಗಳು ನಮ್ಮ ನಡುವೆ ಪಳೆಯುಳಿಕೆಗಳಾಗಿ ಮಾತ್ರ ಉಳಿಯುತ್ತವೆ.

ಇರಲಿ, ಈಗ ಜೇನು ಇಳಿಸುವ ವಿಷಯಕ್ಕೆ ಬರೋಣ. ಜಡೆಯಪ್ಪನನ್ನೂ ತೋಟಕ್ಕೆ ಕರೆಸಿ ಜೇನು ಇಳಿಸಿಕೊಡುವ ದಿನ ನಿಗದಿಪಡಿಸಿದೆವು. ಈ ಅಪರೂಪದ ವಿದ್ಯಮಾನವನ್ನು ಆಮೂಲಾಗ್ರವಾಗಿ ಚಿತ್ರೀಕರಣ ಮಾಡುವ ವ್ಯವಸ್ಥೆಯನ್ನೂ ಮಾಡಿಕೊಂಡೆವು. ಆದರೂ ಇಷ್ಟು ಎತ್ತರದ ನಂದಿ ಮರ ಏರುವುದು ಹೇಗೆ ಎಂಬ ಪ್ರಶ್ನೆ ನನ್ನ ತಲೆಯನ್ನು ಕೊರೆಯುತ್ತಿತ್ತು. 'ನಗ್ನ ಚೆಲುವೆ' ಖ್ಯಾತಿಯ, ಸ್ವಲ್ಪವೂ ಒರಟಾದ ತೊಗಟೆ ಇಲ್ಲದ ನಯವಾದ ಮರ ಈ ನಂದಿ ಮರ. ಕಾಲಿಟ್ಟರೆ ಜಾರುತ್ತದೆ, ಜೊತೆಗೆ ಸಣಕಲು ಕೊಂಬೆ, ಇದು ನನ್ನ ಮತ್ತೊಂದು ಆತಂಕ. 'ಇದಕ್ಕಿಂತ ಎತ್ತರವಾದ ಮರ,